# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೋರಮಂಗಲ ಉಪ-ವಿಭಾಗದ ಜಕ್ಕಸಂದ್ರ ವಾರ್ಡ್ ಸಂಖ್ಯೆ-173 ದಿನಾಂಕ: 21-09-2021 ರಂದು**

**ಸೆಪ್ಟೆಂಬರ್-2021 ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಶ್ರೀ ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173ರ ರವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಕಟ್ಟಡ, ಉದ್ಯಾನವನ ಹತ್ತಿರ, ಹೆಚ್.ಎಸ್.ಆರ್. 5ನೇ ಸೆಕ್ಟರ್, ಜಕ್ಕಸಂದ್ರ, (ಜಕ್ಕಸಂದ್ರ ವಾರ್ಡ್ ಕಛೇರಿ, ಬಿ.ಬಿ.ಎಂ.ಪಿ) ಬೆಂಗಳೂರು ದಿನಾಂಕ: 21.09.2021 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದವರು:-**

1. ಶ್ರೀ ಎನ್. ಶ್ರೀನಿವಾಸಯ್ಯ
2. ಶ್ರೀ ಎಂ.ಹೆಚ್. ಪೊನ್ನಪ್ಪ
3. ಶ್ರೀಮತಿ ಜ್ಯೋತಿ ಜಿ. ಪ್ರಭು
4. ಶ್ರೀಮತಿ ಆರ್. ವೇದಾವತಿ
5. ಶ್ರೀ ಕಿರಣ್ ರೆಡ್ಡಿ
6. ಶ್ರೀಮತಿ ಪ್ರೇಮಕುಮಾರಿ
7. ಶ್ರೀ ಶ್ರೀನಿವಾಸ ಹೊಳ್ಳ .ಜಿ
8. ಶ್ರೀಮತಿ ಸರಸ್ವತಮ್ಮ

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-173 ಜಕ್ಕಸಂದ್ರ
2. ಶ್ರೀ ಎನ್. ಓಬಳೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು
3. ಶ್ರೀ ಅರವಿಂದ .ಆರ್, ಕಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ ಕರಿಯಪ್ಪ, ತೆರಿಗೆ ನಿರೀಕ್ಷಕರು, ಕಂದಾಯ ಇಲಾಖೆ
5. ಶ್ರೀ ಜನಾರ್ಧನ್ .ಬಿ, ಬೆಸ್ಕಾಂ
6. ಶ್ರೀ ಸಂಜೀವ್ ಕುಮಾರ್, ಸೂಪರ್‌ವೈಸರ್, ಘನತ್ಯಾಜ್ಯ

* * * * *

ಶ್ರೀ ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

14ನೇ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗ ಕಾಮಗಾರಿ ನಡೆಯುತ್ತಿದ್ದು, ಗಿಡಗಳನ್ನು ನೆಡಲು ಪಾದಚಾರಿ ಮಾರ್ಗದ ಮಧ್ಯದಲ್ಲಿ ಸೂಕ್ತ ಸ್ಥಳವನ್ನು ನಿಗಧಿಪಡಿಸಿಕೊಡಲು ಹಾಗೂ ಮಳೆ ನೀರು ಸುಗಮವಾಗಿ ರಸ್ತೆಯಿಂದ ಚರಂಡಿಗೆ ಹರಿಯುವಂತೆ ತೋಳು ಚರಂಡಿ (Shoulder Drain) ಗಳನ್ನು ನಿರ್ಮಿಸಲು ಕ್ರಮವಹಿಸುವಂತೆ ಸಂಬಂಧಪಟ್ಟ ಇಂಜಿನಿಯರ್ ರವರಿಗೆ ತಿಳಿಸಲು ವಾರ್ಡ್ ಸಭೆಯ ಗಮನಕ್ಕೆ ತಂದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ರಸ್ತೆ ಮೂಲ ಸೌಕರ್ಯ**

ಹೆಚ್.ಎಸ್.ಆರ್. 5ನೇ ಸೆಕ್ಟರ್‌ನಲ್ಲಿರುವ 14ನೇ ಮುಖ್ಯರಸ್ತೆಯಲ್ಲಿ ಬೀದಿ ದೀಪಗಳು ಹದಗೆಟ್ಟಿದ್ದು, ರೆಗ್ಯೂಲೇಟರ್‌ಗಳು ಮತ್ತು ಟೈಮರ್‌ಗಳು ಇಲ್ಲದೇ ಹಗಲಿನಲ್ಲೂ ಸಹ ದೀಪಗಳು ಉರಿಯುತ್ತಿರುತ್ತವೆ. ಆದುದರಿಂದ ಇವುಗಳನ್ನು ಸರಿಪಡಿಸುವಂತೆ ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**(ವಿದ್ಯುತ್ ವಿಭಾಗ), ಬಿ.ಬಿ.ಎಂ.ಪಿ.**

ಹೆಚ್.ಎಸ್.ಆರ್. ಬಡಾವಣೆಯ 5ನೇ ಹಂತದ 11ನೇ ಮುಖ್ಯರಸ್ತೆಯಲ್ಲಿರುವ ಬಿ.ಬಿ.ಎಂ.ಪಿ. ಉದ್ಯಾನವನವನ್ನು ಬಹಳ ವರ್ಷಗಳ ಹಿಂದೆ ನಿರ್ಮಾಣ ಮಾಡಲಾಗಿದ್ದು, ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಸಭೆಯಲ್ಲಿ ಚರ್ಚಿಸಲಾಯಿತು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಯೋಜನೆ (ದಕ್ಷಿಣ), ಬೃ.ಬೆಂ.ಮ.ಪಾ**

ಹೆಚ್.ಎಸ್.ಆರ್. 5ನೇ ಬಡಾವಣೆಯ 5ನೆ ಅಡ್ಡರಸ್ತೆಯಲ್ಲಿರುವ ಮನೆ ನಂ.283 ಮತ್ತು 14ನೇ ಮುಖ್ಯರಸ್ತೆಯಲ್ಲಿರುವ ಮನೆ ನಂ.15 ರ ಮುಂಭಾಗದಲ್ಲಿ ಯು.ಜಿ.ಡಿ. ಹಾನಿಗೊಂಡಿದ್ದು, ರಸ್ತೆಯಲ್ಲಿ ಕೊಳಚೆ ನೀರು ಹರಿಯುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಇದರ ಬಗ್ಗೆ ಗಮನ ಹರಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು**
**ಬಿ.ಡಬ್ಲ್ಯೂ.ಎಸ್.ಎಸ್.ಬಿ.**

ಹೆಚ್.ಎಸ್.ಆರ್. 5ನೇ ಬಡಾವಣೆಯ 13ನೇ ಮುಖ್ಯರಸ್ತೆ ಮತ್ತು ಐ–ಗೇಟ್ ಸಂಪರ್ಕಿಸುವ ರಸ್ತೆಯಲ್ಲಿ ಸಂಚರಿಸುವ ಭಾರೀ ಗಾತ್ರದ ವಾಹನಗಳನ್ನು ನಿಷೇಧಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಸಂಬಂಧಪಟ್ಟ ಇಲಾಖೆಯವರು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

**ಕ್ರಮ: ಆರಕ್ಷಕ ನಿರೀಕ್ಷಕರು**
**ಮಡಿವಾಳ / ಹೆಚ್.ಎಸ್.ಆರ್ ಸಂಚಾರ ಪೊಲೀಸ್ ಠಾಣೆ**

ಟೀಚರ್ಸ್ ಕಾಲೋನಿ ಮತ್ತು ಹೆಚ್.ಎಸ್.ಆರ್. 5ನೇ ಬಡಾವಣೆಯಲ್ಲಿ ರಾಜ್ಯದಲ್ಲಿ ಕೊರೋನಾ ಬಂದ ನಂತರ ದಿನಗಳಲ್ಲಿ ಹಗಲು ಮತ್ತು ರಾತ್ರಿ ವೇಳೆಯಲ್ಲಿ ಕಳ್ಳತನ ಮತ್ತು ಸುಲಿಗೆಯಂತಹ ಪ್ರಕರಣಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಪೊಲೀಸ್ ಗಸ್ತನ್ನು ಹೆಚ್ಚಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದರು.

**ಕ್ರಮ: ಆರಕ್ಷಕ ನಿರೀಕ್ಷಕರು**
**ಮಡಿವಾಳ / ಹೆಚ್.ಎಸ್.ಆರ್ ಪೊಲೀಸ್ ಠಾಣೆ**

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಸದಸ್ಯ ಕಾರ್ಯದರ್ಶಿ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್–173 ಜಕ್ಕಸಂದ್ರ

(ಶ್ರೀ ಸಂಜೀವಕುಮಾರ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್–173 ಜಕ್ಕಸಂದ್ರ